ತೇಜಸ್ವಿಯವರನ್ನ ನೋಡಬೇಕೆಂಬ ಅಭಿಮಾನಿಗಳಿಗೆ 'ನಿರುತ್ತರ' ತೋಟಕ್ಕೆ ಬರುವುದು ಸುಲಭ ಸಾಧ್ಯವಾಯಿತು. ಒಮ್ಮೆ ಗುಲ್ಬರ್ಗದ ಕೆಲವರು ಧರ್ಮಸ್ಥಳದಿಂದ ಹಿಂತಿರುಗುವ ದಾರಿಯಲ್ಲಿ 'ನಿರುತ್ತರ'ಕ್ಕೆ ಬಂದರು. ಕೆಲಸದ ಒತ್ತಡದಲ್ಲಿದ್ದ ತೇಜಸ್ವಿ ಅವರನ್ನು ಮಧ್ಯಾಹ್ನ ಎರಡು ಗಂಟೆಗೆ ಬರಲು ಹೇಳಿದರು. ಸಮಯಕ್ಕೆ ಸರಿಯಾಗಿ ಹಾಜರಾಗಿ ಅಭಿಮಾನಿಗಳು ಫೋಟೊ ತೆಗಿಸಿಕೊಂಡು ಹೋದರು. 'ರೀ ನೋಡ್ರಿ, ಈ ಅಭಿಮಾನಿಗಳ ಪ್ರೀತಿಯನ್ನು ಶತ್ರುಗಳ ದ್ವೇಷವನ್ನು ತಾಳಿಕೊಳ್ಳುವಂತೆ ತಡಕೊಬೇಕಲ್ಲ' ಎಂಬ ಉದ್ಗಾರ ತೇಜಸ್ವಿಯವರಿಂದ ಹೊರಟಿತು. ಒಂದು ಸಲ ಇವರು ಬರೆಯುವವರು ಎಂದು ಗೊತ್ತಾಗುತ್ತಿದ್ದಂತೆಯೇ ಕರೆಂಟ್ ಕೆಲಸಕ್ಕೆ ಬಂದ ಎಲೆಕ್ಟ್ರಿಕ್ ಆಫೀಸಿನ ಜನ, 'ನೀವು ಬರೀತಿರಂತೆ! ನಮ್ಮ ಮೇಲೂ ಏನಾದರೂ ಬರೀರಿ' ಎಂದು ಕೇಳಿಕೊಂಡರು. ತನ್ನಮೇಲೆ ಏನೊ ಕತೆ ಬರೆದು ಬಿಟ್ಟಿದ್ದಾರೆ ಎಂದು ಯಂಕ್ಟ ಮುನಿಸಿಕೊಂಡ. ಮಾರ ಹೆಣೆದ ಬುಟ್ಟಿ, ಕುಕ್ಕೆ ನೋಡಲು ಒಬ್ಬ ಹುಡುಗ ಬಂದ. ದಯನೀಯ ಸ್ಥಿತಿಯಲ್ಲಿದ್ದ ಸರ್ಕಸ್ ಮಾಲೀಕನೊಬ್ಬ ಹರಿದು ಜೂಲಾದ ಪಾಸ್ ಕೊಟ್ಟು ಸರ್ಕಸ್‌ಗೆ ಬರಬೇಕೆಂದು ಬಿನ್ನವಿಸಿಕೊಂಡ. ಅವನ ಶೋಚನೀಯ ಸ್ಥಿತಿಯನ್ನು ನೋಡಿ ತೇಜಸ್ವಿಯೇ ಅವನಿಗೆ ಒಂದಷ್ಟು ಅಕ್ಕಿ, ಹಣವನ್ನು ಕೊಟ್ಟು ಕಳಿಸಿದರು. ಹೀಗಿತ್ತು ಅವರಿಗೆ ಅಭಿಮಾನಿಗಳ ಕಾಟ.

ಕೆಲವು ವರ್ಷಗಳ ಹಿಂದೆ ಪಿ. ಲಂಕೇಶರು ಒಂದು ಪ್ರತಿಭಟನೆ ಹಾಗೂ ರಾಜ್ಯಪಾಲರಿಗೆ ಒಂದು ಮನವಿ ಸಲ್ಲಿಸುವ ಕಾರ್ಯಕ್ರಮ ಏರ್ಪಡಿಸಿದ್ದರು. ಮೈಸೂರಿಂದ ರಾಮದಾಸ್, ನಿರ್ಮಲಾ, ತೇಜಸ್ವಿ, ಶ್ರೀರಾಮ್ ಮತ್ತು ನಾನು ಬೆಳ್ಳಂಬೆಳಗ್ಗೆ ಬಸ್ಸಿನಲ್ಲಿ ಬೆಂಗಳೂರಿಗೆ ಹೋದೆವು. ಎಲ್ಲರೂ ವಿಧಾನಸೌಧದ ಎದುರಿನ ಕಬ್ಬನ್ ಪಾರ್ಕಿನ ಹುಲ್ಲು ಹಸಿರಿನಲ್ಲಿ ಸೇರಿದೆವು. ಸ್ವಲ್ಪ ಹೊತ್ತಿನ ನಂತರ ನಿರ್ಮಲಾ ಅಲ್ಲಿ ನೋಡಿ ಎಂದರು. ಹುಲ್ಲಿನ ಸಣ್ಣ ದಿಬ್ಬದ ಮೇಲೆ ತೇಜಸ್ವಿ ಅಂಗಾತವಾಗಿ ತಲೆ ಹಿಂದೆ ಎರಡೂ ಕೈಗಳನಿಟ್ಟುಕೊಂಡು ಮಲಗಿ ಮಾತಾಡಿಸಿದವರಿಗೆ ಉತ್ತರ ಕೊಡುತ್ತಿದ್ದಾರೆ. ಅವರ ಕಾಲಿನ ಹತ್ತಿರ ಕೆಲವು ಯುವಕರು ಸೊಂಟದ ಮೇಲೆ ಕೈ ಇಟ್ಟುಕೊಂಡು ನಗುತ್ತ ತೇಜಸ್ವಿಯವರನ್ನೇ ದಿಟ್ಟಿಸುತ್ತಿದ್ದಾರೆ. ತೇಜಸ್ವಿಯವರ ಅನೇಕ ನಡವಳಿಕೆಗಳು ನಮಗೆ ಚಿರಪರಿಚಿತವಾಗಿದ್ದವು. ಆದರೆ, ಅಂದಿನ ಅವರ ಸರಳತೆ ಆ ಯುವಕರನ್ನು ಒಂದು ಅಚ್ಚರಿಯ ಲೋಕಕ್ಕೆ ಕೊಂಡೊಯ್ದಿತ್ತು.

ಸಿಟ್ಟು, ತೀಕ್ಷ್ಣ ಬುದ್ಧಿಮತ್ತೆ, ಮುಗ್ಧ ಕುತೂಹಲ, ಬೆರಗು ಇವುಗಳ ಮೊತ್ತವಾಗಿದ್ದ ತೇಜಸ್ವಿ, ಕೆಲವು ವೇಳೆ ಅವರ ಮಟ್ಟಕ್ಕೆ ಯೋಚನೆ, ಕೆಲಸ ಮಾಡದಿದ್ದವರ ಮೇಲೆ ಸಿಟ್ಟಾಗುತ್ತಿದ್ದರು. ಮರುಗಳಿಗೆಯೇ ಹಲ್ಕಾಗಳಾ! ಗೂಸ್ಲುಗಳಾ! ಎನ್ನುವ ಸಲಿಗೆಯ ಬೈಗುಳಗಳು ಅವರ ಸ್ಪೆಷಾಲಿಟಿ. ನಾವು, ಸ್ನೇಹಿತರ ಹೆಂಡತಿಯರೂ ಇದಕ್ಕೆ ಹೊರತಾಗಿರಲಿಲ್ಲ. ಒಂದು ಬಾರಿ ಮೂಡಿಗೆರೆಯಲ್ಲಿ ಸಾಹಿತ್ಯ ಪರಿಷತ್ ಕಡೆಯಿಂದ ಒಂದು ಕಾರ್ಯಕ್ರಮವಿದ್ದು ಅದರಲ್ಲಿ ಸ್ನೇಹಿತರೊಬ್ಬರ ಪುಸ್ತಕದ ಬಿಡುಗಡೆ ಇತ್ತು. ತೇಜಸ್ವಿ ನನಗೆ ಆ ಕೆಲಸ ಮಾಡಲು ಹೇಳಿದರು. ನಾನು ಸುತರಾಂ ಒಪ್ಪಲಿಲ್ಲ. ಪುಸ್ತಕ ಬಿಡುಗಡೆ ಆಯಿತು. ರಾತ್ರಿ ಮನೆಗೆ ಬಂದ ಮೇಲೆ ತೇಜಸ್ವಿ ನನಗೆ, 'ಇಷ್ಟು ಚಿಕ್ಕ ಕೆಲಸ ಮಾಡಲು ನಿಮಗೆ ಏನ್ ರೋಗ ಬಂದಿತ್ತು? ಆಟ ಆಡ್ತೀರೇನ್ರಿ?' ಎಂದು ರೇಗಿದರು. ನಾನು ಸುಮ್ಮನೆ ನಿಂತೆ, ಒಂದು ಪಾಠ ಕಲಿತೆ. ಹಾಗೆಂದ ಮಾತ್ರಕ್ಕೆ ಅವರು ಹೆಂಗಸರನ್ನು ಅಗೌರವದಿಂದ ಕಾಣುತ್ತಿದ್ದರೆಂದು ಅರ್ಥವಿಲ್ಲ. ಅವು ಸಲಿಗೆಯ ಬೈಗುಳಗಳಾಗುತ್ತಿದ್ದವು. ನಮ್ಮ 'ಪುಸ್ತಕ ಪ್ರಕಾಶನ'ದ ರಘು ಮತ್ತು ನಾವು ಬೈಸಿಕೊಂಡಾಗ 'ಪ್ರೀತಿಯ ನುಡಿಗಳು' ಸಿಕ್ಕಿತಾ ಎಂದು ತಮಾಷೆ ಮಾಡಿಕೊಳ್ಳುತ್ತಿದ್ದೆವು. ರಾಜಕಾರಣಿ, ಚಿಂತಕ ರಾಮಮನೋಹರ ಲೋಹಿಯಾ ವಿಚಾರಗಳಿಂದ ಪ್ರಭಾವಿತರಾದ ಅವರು ಸ್ತ್ರೀಯರ ಬಗ್ಗೆ ತುಂಬಾ ಗೌರವ ಇಟ್ಟುಕೊಂಡು ನಡೆದುಕೊಂಡವರು. ತಮ್ಮ ತಾಯಿ, ತಂಗಿ, ಪತ್ನಿ ಜತೆಗೆ ಎಲ್ಲ ಮಹಿಳೆಯರೊಂದಿಗೂ ಗೌರವದಿಂದ ನಡೆದುಕೊಳ್ಳುತ್ತಿದ್ದರು.